C.R.P.67

Form No.4
(Criminal)
Deposition
Sheets
(R.P.No.57)

# 5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ

## ಸ್ಪೆಷಲ್ ಕೇಸ್ ನಂಬರ್ಃ 78/2019

ಚಾ.ಸಾ.–24 ಪ್ರಾ.ಸಾ.–16

| | |
|---|---|
| **ಸಾಕ್ಷಿದಾರರ ಹೆಸರು** | **ದಿನೇಶ್ ಚಂದ್ರ ಹೆಚ್.ಎಸ್** |
| **ತಂದೆಯ ಹೆಸರು** | **ಹೆಚ್.ಆರ್. ಸುಬ್ಬರಾವ್** |
| **ವಯಸ್ಸು** | **65 ವರ್ಷಗಳು** |
| **ಉದ್ಯೋಗ** | **ನಿವೃತ್ತ ತಹಶೀಲ್ದಾರ್** |
| **ವಾಸ** | **ಬೆಂಗಳೂರು** |

**ದಿನಾಂಕಃ 16.03.2026 ರಂದು ಪ್ರಮಾಣವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರವರಿಂದ**

1. ನಾನು 2015 ರಿಂದ 2017ರವಗೆ ಮಳವಳ್ಳಿ ತಾಲ್ಲೂಕು ಕಛೇರಿಯಲ್ಲಿ ತಹಶೀಲ್ದಾರ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.
2. ದಿಃ19.11.2016 ರಂದು ಈ ಪ್ರಕರಣದ ತನಿಖಾಧಿಕಾರಿಗಳು ಈ ಪ್ರಕರಣದ ಪಿರ್ಯಾದಿ ದಿವ್ಯಾ ಮಳವಳ್ಳಿ ಸರ್ಕಾರಿ ಆಸ್ಪತ್ರೆಯಲ್ಲಿ ಸೀರಿಯಸ್ಸಾಗಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆಂದು ಮೌಖಿಕವಾಗಿ ತಿಳಿಸಿದ್ದು ಆಕೆಯ ಹೇಳಿಕೆಯನ್ನು ದಾಖಲು ಮಾಡಿಕೊಡಬೇಕೆಂದು ಕೋರಿಕೊಂಡಿದ್ದು ಅದರಂತೆ ಅದೇ ದಿನ ಸುಮಾರು ಮಧ್ಯಾಹ್ನ 12.00 ಗಂಟೆಗೆ ನಾನು ಆಸ್ಪತ್ರೆಗೆ ತಲುಪಿದಾಗ ವಾರ್ಡಿನಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಶ್ರೀಮತಿ ದಿವ್ಯಾರವರು ಹೇಳಿಕೆ ಕೊಡುವ ಸ್ಥಿತಿಯಲ್ಲಿ ಇದ್ದಾಳೆ ಎಂದು ಆಕೆಗೆ ಚಿಕಿತ್ಸೆ ನೀಡುತ್ತಿದ್ದ ವೈದ್ಯಾಧಿಕಾರಿಗಳು ದೃಡೀಕರಿಸಿದ ಮೇರೆಗೆ ಆಕೆಯ ಹೇಳಿಕೆಯನ್ನು ಸದರಿ ವೈದ್ಯಾಧಿಕಾರಿಗಳ ಸಮಕ್ಷಮ ದಾಖಲಿಸಿಕೊಂಡಿರುತ್ತೇನೆ. ಸದರಿ ಹೇಳಿಕೆಯನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ–2 ಎಂದು ಗುರುತಿಸಲಾಗಿದೆ, ಅದರಲ್ಲಿ ಸಾಕ್ಷಿಯು ಗುರುತಿಸಿರುವ ಅವರ ಸಹಿಯನ್ನು **ನಿಪಿ–2(ಬಿ)** ಎಂದು ಗುರುತಿಸಲಾಗಿದೆ.

ಸದರಿ ಹೇಳಿಕೆಯಲ್ಲಿ ವೈದ್ಯಾಧಿಕಾರಿಗಳ, ಗಾಯಾಳುವಿನ ಸಹಿಗಳನ್ನು ಪಡೆದುಕೊಂಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ.ವಿ.ಆರ್ ರವರಿಂದ:**

3. ಸಾಮಾನ್ಯವಾಗಿ ಯಾವುದಾದರೂ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿರುವ ವ್ಯಕ್ತಿಯ ಹೇಳಿಕೆಯನ್ನು ಪಡೆದುಕೊಳ್ಳಬೇಕೆಂದು ಇದ್ದರೆ ಆ ಬಗ್ಗೆ ತನಿಖಾಧಿಕಾರಿಗಳಿಂದ ಕೋರಿಕೆ ಪತ್ರವನ್ನು ಪಡೆದುಕೊಂಡು ಅದರ ಸತ್ಯಾಸತ್ಯಗಳ ಬಗ್ಗೆ ಪ್ರಾಥಮಿಕವಾಗಿ ತಿಳಿದುಕೊಂಡು ನಂತರ ಆಸ್ಪತ್ರೆಗೆ ಹೋಗಿ ಸದರಿ ವ್ಯಕ್ತಿಯ ಹೇಳಿಕಯನ್ನು ದಾಖಲಿಸಿಕೊಳ್ಳುವುದು ವಾಡಿಕೆ. ಸಾಮಾನ್ಯವಾಗಿ ನಾನು ಕಛೇರಿಗೆ ಹಾಜರಾದಾಗ ಆಯಾ ದಿನ ಎಲ್ಲೆಲ್ಲಿಗೆ ಕರ್ತವ್ಯದ ನಿಮಿತ್ತ ಹೋಗಿರುತ್ತೇನೆ ಎನ್ನುವುದು ಕಛೇರಿಯ ವಹಿಯನ್ನು ನಮೂದಿಸುತ್ತೇವೆ. ನಾನು ದಿಃ19.11.2016 ರಂದು ಮಳವಳ್ಳಿ ಆಸ್ಪತ್ರೆಗೆ ಹೋಗಿ ಚಾಸಾ- 1 ರವರ ಹೇಳಿಕೆಯನ್ನು ದಾಖಲಿಸಿಕೊಳ್ಳುವ ಬಗ್ಗೆ ನನ್ನ ಕಛೇರಿಯ ದಿನಚರಿಯಲ್ಲಿ ನಮೂದು ಮಾಡಿರುವುದಿಲ್ಲ. ನಿಪಿ-2 ಹೇಳಿಕೆಯಲ್ಲಿರುವ ಕೈ ಬರಹ ನನ್ನದ್ದಲ್ಲ ಅದು ಮಳವಳ್ಳಿ ಪೋಲೀಸ್ ಠಾಣೆಯ ರೈಟರ್ ಆಸ್ಪತ್ರೆಗೆ ಬಂದಿದ್ದು ಸದರಿಯವರು ಅದನ್ನು ಬರವಣಿಗೆ ಮಾಡಿಕೊಂಡಿರುತ್ತಾರೆ. ಸದರಿ ರೈಟರ್ ರವರು ನಿಪಿ-2 ಹೇಳಿಕೆಯನ್ನು ಬರವಣಿಗೆ ಮಾಡಿರುತ್ತಾರೆ ಎಂದು ತೋರಿಸಲು ಅವರ ಹೆಸರಾಗಲಿ ಹುದ್ದೆಯಾಗಲೀ ಸಹಿಯಾಗಲೀ ನಿಪಿ-2 ರಲ್ಲಿ ಇರುವುದಿಲ್ಲ. ನಿಪಿ-2 ಹೇಳಿಕೆಯಲ್ಲಿ ನಾನು ಆ ದಿನ ಮಧ್ಯಾಹ್ನ 12.00 ಗಂಟೆಯಿಂದ 12.30 ರ ಮಧ್ಯೆ ಸದರಿ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ ಎಂದು ನಮೂದಿಸಿರುವುದಿಲ್ಲ. ನಾನು ಆ ದಿನ ಮಳವಳ್ಳಿ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿರುವುದೂ ಇಲ್ಲ, ಚಾಸಾ- 1 ರವರು ನನ್ನ ಮುಂದೆ ಯಾವುದೇ ಹೇಳಿಕೆ ನೀಡಿರುವುದೂ ಇಲ್ಲ ಎಂದರೆ ಸರಿಯಲ್ಲ. ನಿಪಿ-2 ದಾಖಲೆಯಲ್ಲಿ ನನ್ನ ಸಹಿ ಹೊರತುಪಡಿಸಿ ನನ್ನ ಹುದ್ದೆಯ ಪದನಾಮವಾಗಲೀ, ಕಛೇರಿಯ ಮೊಹರಾಗಲೀ ನಮೂದಿಸಿರುವುದಿಲ್ಲ ಎಂದರೆ ಸರಿ. ಯಾರೋ ಸೃಷ್ಟಿಸಿದ ದಾಖಲೆಗೆ ತನಿಖಾದಿಕಾರಿಗಳ ಜೊತೆ ಷರೀಕಾಗಿ ಪಿರ್ಯಾದಿಗೆ ಅನುಕೂಲವಾಗುವಂತೆ ನಮ್ಮ ಕಛೇರಿಯಲ್ಲಿ ಕುಳಿತು ನಿಪಿ-2 ದಾಖಲೆಗೆ ನನ್ನ ಸಹಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-2 ದಾಖಲೆಯನ್ನು ತನಿಖಾಧಿಕಾರಿಗಳ ವಶಕ್ಕೆ ಆಸ್ಪತ್ರೆಯಲ್ಲಿಯೇ

ನಾನು ನೀಡಿರುತ್ತೇನೆ. ಈ ಬಗ್ಗೆ ನಿಪಿ–2 ದಾಖಲೆಯಲ್ಲಿ ಯಾವುದೇ ನಮೂದು ಇರುವುದಿಲ್ಲ.

4. ಈ ಪ್ರಕರಣಕ್ಕೂ ಆರೋಪಿಗೂ ಯಾವುದೇ ಸಂಬಂದ ಇಲ್ಲ ಎಂದು ತಿಳಿದುಕೊಂಡಿದ್ದರೂ ಸಹಾ ತನಿಖಾಧಿಕಾರಿಗಳ ಜೊತೆ ಷರೀಕಾಗಿ ಅವರು ಸುಳ್ಳಾಗಿ ಸೃಷ್ಟಿಸಿದ ನಿಪಿ–2 ದಾಖಲೆಗೆ ಕಛೇರಿಯಲ್ಲಿ ಸಹಿ ಮಾಡಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರವರಿಂದಃ** ಇಲ್ಲ ಎಂದು ನುಡಿಯುತ್ತಾರೆ.

(ನನ್ನ ಉತ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದೆ**

**(ಮಂಜುಳಾ ಇಟ್ಟಿ)**
**5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ**
**ನ್ಯಾಯಾಲಯ, ಮಂಡ್ಯ**